ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರ.ಸಂ: ಸ.ಕಾ.ಅ/ಬ್ಯಾ.ಉ.ವಿ/ಬಿ.ಬಿ.ಎಂ.ಪಿ/ಪಿ.ಆರ್/343/2020-21

ಸಂಖ್ಯೆ:
ದಿನಾಂಕ:

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಬ್ಯಾಟರಾಯನಪುರ ಉಪ ವಿಭಾಗ
ದಾಸರಹಳ್ಳಿ, ಬೆಂಗಳೂರು-24
ದಿನಾಂಕ: 14-12-2020

ರವರಿಗೆ
ಕಾರ್ಯಪಾಲಕ ಅಭಿಯಂತರರು
ಬೃಹತ್ ನೀರುಗಾಲುವೆ ವಿಭಾಗ
ಯಲಹಂಕ ವಲಯ, ಬಿಬಿಎಂಪಿ
ಜಯನಗರ ವಾಣಿಜ್ಯ ಸಂಕೀರ್ಣ
ಬೆಂಗಳೂರು

ಸಂಖ್ಯೆ:
ದಿನಾಂಕ: 15/12/2020

ಮಾನ್ಯರೇ,

ವಿಷಯ: ಬಿಬಿಎಂಪಿ ಯಲಹಂಕ ವಲಯ ವಾರ್ಡ್ ನಂ. 05ರ ವ್ಯಾಪ್ತಿಯಲ್ಲಿ ಬರುವ ಕಟ್ಟಿಗೇನಹಳ್ಳಿ ಭಗತ್ ಎನ್‌ಕ್ಲೇವ್ ಬಡಾವಣೆಯಲ್ಲಿ ಮಳೆ ನೀರು ಕಾಲುವೆಯನ್ನು ಅಭಿವೃದ್ದಿ ಪಡಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ವಾರ್ಡ್ ನಂ. 05ರ ವ್ಯಾಪ್ತಿಯಲ್ಲಿ ಬರುವ ಕಟ್ಟಿಗೇನಹಳ್ಳಿ ಭಗತ್ ಎನ್‌ಕ್ಲೇವ್ ಬಡಾವಣೆಯಲ್ಲಿ ಮಳೆ ನೀರು ಕಿರು ಕಾಲುವೆ ಹಾದು ಹೋಗಿದ್ದು, ಕಾಲುವೆಯಲ್ಲಿ ಹೂಳು ತುಂಬಿ ಮಳೆಗಾಲದಲ್ಲಿ ಕಾಲುವೆಯಲ್ಲಿ ನೀರು ಹರಿಯದೇ ಮನೆಗಳಿಗೆ ನೀರು ನುಗ್ಗುತ್ತಿರುವುದರಿಂದ ಕಾಲುವೆಯನ್ನು ಅಭಿವೃದ್ದಿ ಪಡಿಸುವಂತೆ ಸಾರ್ವಜನಿಕರು ಸ್ಥಳೀಯ ಪಾಲಿಕೆ ಸದಸ್ಯರು ಮತ್ತು ಶಾಸಕರು ರವರಿಗೆ ಮನವಿ ಮಾಡಿರುತ್ತಾರೆ. ಸಾರ್ವಜನಿಕರ ಮನವಿಯ ಮೇರೆಗೆ ಕಾಮಗಾರಿಯನ್ನು ಅವಶ್ಯಕವಾಗಿ ತುರ್ತಾಗಿ ಮಾಡಬೇಕಾಗಿದ್ದು, 2019-20ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಬಿಬಿಎಂಪಿ ವತಿಯಿಂದ ಕಾಮಗಾರಿಯನ್ನು ಕೈಗೊಳ್ಳಲು ರೂ. 10.00 ಲಕ್ಷಗಳ ಅನುದಾನವು ಮಂಜೂರಾಗಿರುತ್ತದೆ.

ಆದುದರಿಂದ ಸದರಿ ಅನುದಾನದಲ್ಲಿ ಕಟ್ಟಿಗೇನಹಳ್ಳಿ ಭಗತ್ ಎನ್‌ಕ್ಲೇವ್ ಬಡಾವಣೆಯಲ್ಲಿ 112.00 ಮೀಟರ್ ಮಳೆನೀರು ಕಿರುಗಾಲುವೆಯನ್ನು ಈ ಉಪ ವಿಭಾಗ ಕಛೇರಿಯಿಂದ ಅಭಿವೃದ್ದಿಪಡಿಸಲಾಗಿರುತ್ತದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

14/12/2020

ಸಹಾಯಕ ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ಉಪ ವಿಭಾಗ
ಬಿಬಿಎಂಪಿ, ಬೆಂಗಳೂರು-24

ಪ್ರತಿಯನ್ನು.

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃ.ನೀ.ಗಾ ಉಪ ವಿಭಾಗ, ಬಿಬಿಎಂಪಿ, ಜಯನಗರ ವಾಣಿಜ್ಯ ಸಂಕೀರ್ಣ, ಬೆಂಗಳೂರು ರವರ ಮಾಹಿಗಿಗಾಗಿ ಸಲ್ಲಿಸಿದೆ.
2. ಕಛೇರಿ ಪ್ರತಿ.